೧	೨	೩	೪	೫	೬
೮೩)	ಯೆರಜಾರ್ಲಿ	೧೦	೮೪)	ಹಿರೆಉಳ್ಳಿಗೆರೆ	೧೦
೮೫)	ಚಿಕ್ಕಉಳ್ಳಿಗೆರೆ	೧೦	೮೬)	ಮಣಿಕಟ್ಟಿ	೧೦
೮೭)	ಗೊಪನಕೊಪ್ಪ	೧೦	೮೮)	ಅಕ್ಕಿಸಾಗರ	೧೦
೮೯)	ಮುಳ್ಳಿಕೆರಿ	೧೦	೯೦)	ಯಕ್ಕೆರಿ	೧೦
೯೧)	ಆರ್ತಿಗಲ್	೧೦	೯೨)	ಬಾಸರ್ಗಿ	೧೦
೯೩)	ಬುಡಿಗೊಪ್ಪ	೧೦	೯೪)	ನುಗ್ಗನಟ್ಟಿ	೯
೯೫)	ತಾಮಲಗೇರಿ	೧೧	೯೬)	ಮುಗಳಿಹಾಳ	೨೦

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸಬಹುದಾದ ಪ್ರಶ್ನೋತ್ತರಗಳು.

ಶ್ರೀ ಎ. ಲಕ್ಷ್ಮಿಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ನಾನು ಸಭೆಯ ಮುಂದಿಡುತ್ತೇನೆ.

ಕರ್ನಾಟಕದಲ್ಲಿ ಕೈಗಾರಿಕಾ ಉದ್ದಿಮೆಗಳ ಸ್ಥಾಪನೆ

೯೯ (೮೬) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲ್).—ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಎಷ್ಟು ಕೈಗಾರಿಕಾ ಎಸ್ಟೇಟುಗಳಿವೆ?

ಆ) ಎಷ್ಟು ತಾಲ್ಲೂಕುಗಳಲ್ಲಿ ಹೊಸದಾಗಿ ಸ್ಥಾಪನೆ ಮಾಡಲು ಉದ್ದೇಶಿಸಲಾಗಿದೆ?

ಇ) ಕೋಲಾರ ಜಿಲ್ಲೆಯಲ್ಲಿ ಕೈಗಾರಿಕಾ ಎಸ್ಟೇಟು ಸ್ಥಾಪಿಸುವ ಉದ್ದೇಶವೇನಾದರೂ ಸರ್ಕಾರ ದವರಿಗಿದೆಯೆ?

ಈ) ಮುಳಬಾಗಲ್ ನಗರದಲ್ಲಿ ಕೈಗಾರಿಕಾ ಎಸ್ಟೇಟು ಸ್ಥಾಪನೆ ಯಾವ ಹಂತದಲ್ಲಿದೆ ?

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ರಾಜ್ಯದಲ್ಲಿ ೬೧ ತಾಲ್ಲೂಕುಗಳಲ್ಲಿ ೭೯ ಕೈಗಾರಿಕಾ ವಸಾಹತುಗಳು ಸ್ಥಾಪಿತವಾಗಿದೆ.

ಆ) ಐದು ತಾಲ್ಲೂಕುಗಳಲ್ಲಿ ಹೊಸದಾಗಿ ೮ ಕೈಗಾರಿಕಾ ವಸಾಹತುಗಳನ್ನು ೮೬-೮೭ ರಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಇ) ಈಗಾಗಲೇ ಕೋಲಾರ ಜಿಲ್ಲೆಯಲ್ಲಿ ೫ ಸ್ಥಳಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಿದೆ.

ಈ) ಮುಳಬಾಗಲ್‌ನಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರಿಂದ ಪಡೆದ ೫ ಎಕರೆ ಜಮೀನಿನಲ್ಲಿ ೪ ಡಿ ಮಾದರಿ ಷೆಡ್ಡು ಹಾಗೂ ೪ ಸ್ಮಾಲ್ ಎಸ್ ಮಾದರಿ ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಉದ್ದಿಮೆಗಳಿಗೆ ಬಡ್ಡಿ ರಹಿತ ಸಾಲವನ್ನು ನೀಡುವ ಬಗ್ಗೆ

೧೦೧ (೧೦೦) ಶ್ರೀ ಕೆ. ಸೆಟ್. ಪಾಟೀಲ್ (ಗದಗ).—ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್‌ಶಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸರ್ಕಾರದವರ ವಚನದಂತೆ ಉದ್ದಿಮೆಗಳಿಗೆ ಬಡ್ಡಿರಹಿತ ಸಾಲ ಕೇಳಿ ಅದು ಮಂಜೂರಾಗಿದ್ದರೂ ಹಣದ ಕೊರತೆಯಿಂದ ಸಾಲ ನೀಡುವುದನ್ನು ಮುಂದೆ ಹಾಕುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇದರಿಂದ ಪ್ರಾರಂಭಿಸಿದ ಉದ್ದಿಮೆಗಳಿಗೆ ತೊಂದರೆಯಾಗುವುದಿಲ್ಲವೆ?

ಇ) ಹಾಗಿದ್ದಲ್ಲಿ ಸದರಿ ಉದ್ದಿಮೆಗಳಿಗೆ ಯಾವಾಗ ಬಡ್ಡಿ ರಹಿತ ಸಾಲದ ಹಣವನ್ನು ನೀಡಲಾಗುವುದು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು). —

ಆ) ಹೌದು. ಕೆಲವು ಘಟಕಗಳಿಗೆ ಮಾತ್ರ ಮಂಜೂರಾಗಿರುವ ಬಂಡವಾಳ ಸಾಲ ಇನ್ನೂ ಬಿಡುಗಡೆಯಾಗಿಲ್ಲ.

ಆ) ಇಲ್ಲ.

ಇ) ಮಂಜೂರಾಗಿರುವ ಸಾಲವನ್ನು ಸಾಧ್ಯವಾದಷ್ಟು ಬೇಗ ಬಿಡುಗಡೆ ಮಾಡಲು ಸರ್ಕಾರವು ಎಲ್ಲಾ ಪ್ರಯತ್ನವನ್ನು ಮಾಡುವುದು.

ರಾಜ್ಯದಲ್ಲಿನ ರೇಷ್ಮೆ ಕೃಷಿಯ ಬಗ್ಗೆ

೧೦೨ (೩೮೨) ಶ್ರೀ ಜಿ. ರಾಜಗೌಡ (ಹನೂರು). —ಮಾನ್ಯ ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ: —

ಅ) ರಾಜ್ಯದಲ್ಲಿ ೧೯೮೫-೮೬, ೧೯೮೬-೮೭ರಲ್ಲಿ ರೇಷ್ಮೆ ವಿನಿಮಯ ಕೇಂದ್ರದಿಂದ, ಗೂಡಿನ ಮಾರುಕಟ್ಟೆಗಳಿಂದ ಗಳಿಸಿರುವ ದಲ್ಲಾಳಿ ಶುಲ್ಕ ಎಷ್ಟು ?

ಆ) ಈ ಹಣದಲ್ಲಿ ರೇಷ್ಮೆ ಕೃಷಿ ಹಾಗೂ ರೇಷ್ಮೆ ಉದ್ಯಮದ ಅಭಿವೃದ್ಧಿಗಾಗಿ ಎಷ್ಟು ಪೆಚ್ಚ ಮಾಡಲಾಗಿದೆ ?

ಇ) ರಾಜ್ಯದಲ್ಲಿ ಸೂಲು ಬಿಚ್ಚುವ ಘಟಕಗಳಿಂದ ಕಳೆದ ಮೂರು ವರ್ಷಗಳಿಂದಾಗಿರುವ ನಷ್ಟ ವೆಷ್ಟು ?

ಈ) ಇದನ್ನು ತಪ್ಪಿಸಲು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು). —

ಅ) ರೇಷ್ಮೆ ವಿನಿಮಯ ಕೇಂದ್ರ ಮತ್ತು ರೇಷ್ಮೆಗೂಡಿನ ಮಾರುಕಟ್ಟೆಗಳಲ್ಲಿ ದಲ್ಲಾಳಿ ಶುಲ್ಕ ವಸೂಲಿ ಮಾಡುತ್ತಿಲ್ಲ. ಆದರೆ ಮಾರುಕಟ್ಟೆ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ.

೧೯೮೫-೮೬, ೧೯೮೬-೮೭ನೇ ಸಾಲಿನ ಡಿಸೆಂಬರ್ ೧೯೮೭ ಅಂತ್ಯದವರೆಗೆ ಗಳಿಸಿರುವ ಮಾರುಕಟ್ಟೆ ಶುಲ್ಕ ರೂ. ೮೨೧.೩೯ ಲಕ್ಷಗಳು. ವಿವರಗಳು ಈ ಕೆಳಕಂಡಂತಿವೆ.

	೧೯೮೫-೮೬	೧೯೮೬-೮೭ (ಡಿಸೆಂಬರ್ ೮೭ರ ಅಂತ್ಯದವರೆಗೆ)
ರೇಷ್ಮೆ ವಿನಿಮಯ ಕೇಂದ್ರಗಳು	೧೨೮.೭೧	೧೦೬.೮೮
ರೇಷ್ಮೆ ಗೂಡಿನ ಮಾರುಕಟ್ಟೆಗಳು	೩೩೬.೧೫	೨೫೦.೪೪೦
ಒಟ್ಟು	೪೬೪.೮೬	೩೫೬.೩೭

ಆ) ೧೯೭೯-೮೦ರ ಡಿಸೆಂಬರ್‌ನಿಂದ ರೇಷ್ಮೆ ವಿನಿಮಯ ಕೇಂದ್ರ ಮತ್ತು ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಗಳಿಸಿದ ಮಾರುಕಟ್ಟೆ ಶುಲ್ಕವನ್ನು ಜೆಲೆ ಸ್ಥಿರೀಕರಣ ನಿಧಿಗೆ ಜಮಾ ಮಾಡಲಾಗುತ್ತಿದೆ. ೧೯೮೫-೮೬ ಮತ್ತು ೧೯೮೬-೮೭ ನೇ ಸಾಲಿನ ಡಿಸೆಂಬರ್ ಅಂತ್ಯದವರೆಗೆ ರೂ. ೧೦.೪೩೦ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.